D. No. 897

ತಂತಿ ವಿಳಾಸ: ಯೂನಿರೆಜ್
ದೂರವಾಣಿ ಸಂಖ್ಯೆ.: 2419222/2419361
ಫ್ಯಾಕ್ಸ್: 0821-2419363/2419301

e-mail: registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ: 1916

ವಿಶ್ವವಿದ್ಯಾನಿಲಯಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

(Re-accredited by NAAC at "A" Grade with a CGPA of 3.47)
(Ranked 57th overall and 36th among Universities in NIRF ranking 2017)

ಸಂಖ್ಯೆ:ಪಿ.ಎಂ.ಇ.ಬಿ./08/ರೂಸಾ2.0/2018-19 ದಿನಾಂಕ:18-12-2018.

## ಸುತ್ತೋಲೆ

ವಿಷಯ: Research Innovation and Quality Enhancement ಗೆ ಸಂಶೋಧನಾ ಯೋಜನೆಯ ಪ್ರಸ್ತಾವನೆಗಳನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ:1) ದಿನಾಂಕ:10-12-2018ರಂದು ನವದೆಹಲಿಯಲ್ಲಿ ನಡೆದ RUSA ಅನುದಾನದ ಬಗೆಗಿನ ಸಭೆಯ ಶಿಫಾರಸ್ಸು.

2) ದಿನಾಂಕ 14.12.2018 ರಂದು ನಡೆದ RUSA II Phase grant ಸಮಿತಿ ಸಭೆಯ ತೀರ್ಮಾನ.

*****

ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಮತ್ತು ದಿನಾಂಕ:10-12-2018ರಂದು ನವದೆಹಲಿಯಲ್ಲಿ ನಡೆದ RUSA ಅನುದಾನದ ಬಗೆಗಿನ ಸಭೆಯ ಶಿಫಾರಸ್ಸಿನಂತೆ, RUSA 2.0 ಯೋಜನೆಯ ಸಂಶೋಧನೆ, ಅನ್ವೇಷಣೆ ಮತ್ತು ಗುಣಮಟ್ಟ ಅಭಿವೃದ್ಧಿ (Research Innovation and Quality Enhancement) ಬಗೆಗಿನ ಅನುದಾನದಲ್ಲಿ ಸಂಶೋಧನಾ ಯೋಜನೆಯ ಪ್ರಸ್ತಾವನೆಗಳನ್ನು ಸಲ್ಲಿಸಬಹುದಾಗಿದ್ದು, ಈ ಬಗೆಗೆ ಕೆಳಗೆ ಸೂಚಿಸಿರುವ ಮಾರ್ಗದರ್ಶಿ ಸೂತ್ರಗಳನ್ನು ಪಾಲಿಸಬೇಕೆಂದು ಸೂಚಿಸಲಾಗಿದೆ.

1. ಸಂಶೋಧನಾ ಯೋಜನೆಗಳು ಒಂದು ವರ್ಷ ಅವಧಿಯದ್ದಾಗಿರಬೇಕು.
2. ಸಂಶೋಧನಾ ವಿಷಯಗಳು ಅಂತರ ಶಿಸ್ತೀಯ (Interdisciplinary) ನೆಲೆಯಲ್ಲಿರಬೇಕು.
3. ಸಂಶೋಧನಾ ಯೋಜನೆಗಳಲ್ಲಿ ವಿವಿಧ ವಿಭಾಗಗಳಿಂದ ಪ್ರಧಾನ ಪರಿಶೋಧಕರು ಹಾಗೂ ಸಹಪ್ರಧಾನ ಸಂಶೋಧಕರನ್ನು ಸೇರಿಸಿಕೊಳ್ಳಬೇಕು.
4. ಯೋಜನೆಗಳಲ್ಲಿ ಕ್ಲಸ್ಟರ್ ವಿಶ್ವವಿದ್ಯಾನಿಲಯಗಳಲ್ಲಿ (ಬೆಂಗಳೂರು, ಮಂಗಳೂರು, ಕುವೆಂಪು, ಕರ್ನಾಟಕ ಮತ್ತು ಗುಲ್ಬರ್ಗ ವಿಶ್ವವಿದ್ಯಾನಿಲಯಗಳು) ಒಂದೆರಡು ವಿಶ್ವವಿದ್ಯಾನಿಲಯಗಳ ಸಹ ಪ್ರಧಾನ ಪರಿಶೋಧಕರನ್ನು ಸೇರಿಸಬೇಕು.
5. ಯೋಜನೆಯ ಒಟ್ಟು ಆಯವ್ಯಯ ಪ್ರಸ್ತಾವನೆ ಸುಮಾರು ರೂ.5 ರಿಂದ 7 ಕೋಟಿಗಳಷ್ಟಿರಬೇಕು.
6. ಯೋಜನೆಗಳಲ್ಲಿ ಪಿ.ಹೆಚ್.ಡಿ. ನಂತರದ ಸಂಶೋಧನಾ ಶಿಷ್ಯವೇತನ (Post Doctoral Fellowship) ಗಳಿಗೆ ಅವಕಾಶ ಕಲ್ಪಿಸಬೇಕು.
7. ಸಂಶೋಧನಾ ಯೋಜನೆಯ ಪ್ರಸ್ತಾವನೆಗಳಲ್ಲಿ ವಿದೇಶಿ PDF ಸಂಶೋಧಕರನ್ನು ಮತ್ತು ವಿದೇಶಿ ಪರಿಣಿತರನ್ನು ಸೇರಿಸಿಕೊಳ್ಳಲು ಅವಕಾಶವಿರುತ್ತದೆ.

ಪು.ತಿ.ನೋ.

8. ಯೋಜನೆಯ ಪ್ರಸ್ತಾವನೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕಿರುವುದರಿಂದ ಪೂರ್ಣ ಪ್ರಸ್ತಾವನೆಯ ಗಣಕೀಕೃತ ಆವೃತ್ತಿಯನ್ನು ಸಿದ್ಧಪಡಿಸಿರಬೇಕು.
9. ಪ್ರಸ್ತಾವನೆಗಳನ್ನು ದಿನಾಂಕ:05-01-2019 ರೊಳಗೆ ಸಿದ್ಧಪಡಿಸಿ ನಿರ್ದೇಶಕರು, ಪಿ.ಎಂ.ಇ.ಬಿ.(pmeb@uni-mysore.ac.in) ಇವರಿಗೆ ಕಳುಹಿಸಬೇಕು.
10. ಸುಮಾರು 4/5 ಪ್ರಸ್ತಾವನೆಗಳಿಗೆ ಮಾತ್ರ ಅನುದಾನದ ಲಭ್ಯತೆ ಇರುವುದರಿಂದ ಮಾನ್ಯ ಕುಲಪತಿಗಳು ನೇಮಿಸುವ ಪರಿಣಿತರ ಸಮಿತಿಯು ಆಯ್ಕೆ ಮಾಡುವ ಪ್ರಸ್ತಾವನೆಗಳನ್ನು ಮಾತ್ರವೇ RUSA ಯೋಜನೆಯ ಆಯ್ಕೆ ಪ್ರಕ್ರಿಯೆಗೆ ಸಲ್ಲಿಸಲಾಗುವುದು.

Raghu 19/12/18

ಕುಲಸಚಿವ

ಇವರಿಗೆ:

1. ಅಧ್ಯಕ್ಷರು, ಎಲ್ಲಾ ಅಧ್ಯಯನ ವಿಭಾಗಗಳು/ಸಂಸ್ಥೆಯ ನಿರ್ದೇಶಕರು/ಸಂಯೋಜಕರು, ಮಾನಸಗಂಗೋತ್ರಿ, ಮೈಸೂರು.
2. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ ಮಂಡ್ಯ/ಹಾಸನ/ಚಾಮರಾಜನಗರ.
3. ಆಡಳಿತಾಧಿಕಾರಿಗಳು, ಆಡಳಿತಾಧಿಕಾರಿಗಳ ಕಛೇರಿ, ಮಾನಸಗಂಗೋತ್ರಿ, ಮೈಸೂರು.

ಪ್ರತಿ:

1. ಎಲ್ಲಾ ನಿಕಾಯಗಳ ಡೀನರು, ಮಾನಸಗಂಗೋತ್ರಿ, ಮೈಸೂರು.
2. ಕುಲಸಚಿವರು(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಪ್ರೊ.ಸುರೇಶ್, ಸಿಸ್ಟಂ ಕೋ-ಆರ್ಡಿನೇಟರ್, ಐ.ಸಿ.ಡಿ., ಗಣಕ ವಿಜ್ಞಾನಅಧ್ಯಯನ ವಿಭಾಗ, ಮಾ.ಗಂ.,- ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿಮಾಹಿತಿಗಾಗಿ ಪ್ರಕಟಿಸುವಂತೆ ಕೋರಿದೆ.
5. ಉಪಕುಲಸಚಿವರು/ಸಹಾಯಕ ಕುಲಸಚಿವರು(ಸಾಮಾನ್ಯ/ಸಿಬ್ಬಂದಿ/ಪಿ.ಡಿ.ಐ.), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ಮಾನ್ಯ ಕುಲಪತಿಗಳ/ಕುಲಸಚಿವರ/ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಕಛೇರಿ ಪ್ರತಿ.

RUSA Circular.bsg